# 1.ಸಿರಿ ಕನ್ನಡ ನುಡಿ ಬಳಗ : ಪ್ರಥಮ ಭಾಷೆ:ಪ.ಪೂ-4. ಮೃಗ ಮತ್ತು ಸುಂದರಿ

NAME : ______________

CLASS : ______________

DATE : ______________

40 Questions

1. 'ಮೃಗ ಮತ್ತು ಸುಂದರಿ' ಕಥೆಯ ಅನುವಾದಕರು

- [ ] a) ಪಿ.ಲಂಕೇಶ್
- [ ] b) ಜಿ.ರಾಮಕೃಷ್ಣ
- [ ] c) ವಿಜಯಶ್ರೀ ಸಬರದ
- [ ] d) ದೇವನೂರು ಮಹಾದೇವ

2. ' ಮೃಗ ಮತ್ತು ಸುಂದರಿ ' ಎಂಬ ಕಥೆಯನ್ನು ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ ?

- [ ] a) ಸಂಕ್ರಾಂತಿ
- [ ] b) ಈಡಿಪಸ್
- [ ] c) ಕಲ್ಲು ಕರಗುವ ಸಮಯ
- [ ] d) ಮಂಜು ಕವಿದ ಸಂಜೆ

3. ವರ್ತಕನ ಗುಣಗಳು ಹೇಗಿದ್ದವು ?

- [ ] a) ಮೃದು ಸ್ವಭಾವದವನಾಗಿದ್ದನು
- [ ] b) ಧರ್ಮವಂತನಾಗಿದ್ದನು.
- [ ] c) ಜೀವನ ಸರಳವಾಗಿತ್ತು.
- [ ] d) ಇವೆಲ್ಲವೂ

4. ವರ್ತಕನಿಗೆ ಎಷ್ಟು ಜನ ಹೆಣ್ಣು ಮಕ್ಕಳಿದ್ದರು ?

- [ ] a) 3
- [ ] b) 4
- [ ] c) 5
- [ ] d) 6

5. ವರ್ತಕನ ಹಿರಿಯ ಇಬ್ಬರು ಮಕ್ಕಳ ವರ್ತನೆಗಳು ಹೇಗಿದ್ದವು ?

- [ ] a) ಬಿಂಕ ,ಬಡಿವಾರದವರಾಗಿದ್ದರು
- [ ] b) ಫ್ಯಾಷನ್, ಪಾರ್ಟಿ ಮಾಡುವವರಾಗಿದ್ದರು
- [ ] c) ಗೆಳೆಯರೆಂದರೆ ಅವರಿಗೆ ಪಂಚಪ್ರಾಣವಾಗಿತ್ತು.
- [ ] d) ಈ ಎಲ್ಲಾ ವರ್ತನೆಗಳಿದ್ದವು.

6. ಸುಂದರಿಯ ಗುಣಗಳು ಹೇಗಿದ್ದವು ?

- [ ] a) ತಂದೆಯಷ್ಟೆ ಮೃದು ಸ್ವಭಾವದವಳಾಗಿದ್ದಳು
- [ ] b) ಆಕೆಯ ತಂದೆಯ ನೆಮ್ಮದಿ ಮುಖ್ಯವಾಗಿತ್ತು
- [ ] c) ರೂಪವತಿಯಾಗಿದ್ದು, ಅವಳ ಜೀವನ ಸರಳವಾಗಿತ್ತು.
- [ ] d) ಇವೆಲ್ಲವೂ

7. ವರ್ತಕನಿಗೆ ಕಷ್ಟಗಳು ಶುರುವಾಗಲು ಕಾರಣ

☐ a) ವರ್ತಕನ ವ್ಯಾಪಾರ ಕುಸಿದು ಬಿದ್ದಿದ್ದರಿಂದ

☐ b) ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂತಿರುಗದೆ ಇದ್ದದ್ದು

☐ c) ಬರಬೇಕಾದ ಹಣ ಬರದೆ ಇದ್ದದ್ದು ಮತ್ತು ಸಾಲಗಳು ಬಾಧಿಸತೊಡಗಿದ್ದು

☐ d) ಇವೆಲ್ಲವುಗಳಿಂದ

8. "ನಾವಿನ್ನು ನಗರದಲ್ಲಿ ವಾಸಿಸುವುದು ಕಷ್ಟ ಆದ್ದರಿಂದ ಹಳ್ಳಿಗೆ ಹೋಗಬೇಕಾಗಿದೆ ದಯಮಾಡಿ ಸಹಕರಿಸಿ" ಎಂದು ಯಾರು ಯಾರಿಗೆ ಹೇಳಿದರು ?

☐ a) ಸುಂದರಿ - ತನ್ನ ಸಹೋದರಿಯರಿಗೆ

☐ b) ವರ್ತಕ - ತನ್ನ ಮಕ್ಕಳಿಗೆ

☐ c) ಸುಂದರಿ - ವರ್ತಕನಿಗೆ

☐ d) ರಾಜಕುಮಾರ - ಸುಂದರಿಗೆ

9. ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದವರು

☐ a) ವರ್ತಕ

☐ b) ರಾಜಕುಮಾರ

☐ c) ಹಡಗುಗಳು

☐ d) ವಿಮಾನಗಳು

10. ವರ್ತಕ "ಹಳ್ಳಿಗೆ ಹೋಗಬೇಕಾಗಿದೆ ದಯಮಾಡಿ ಸಹಕರಿಸಿ" ಎಂದಾಗ ಆಘಾತ ಮತ್ತು ನಿರಾಸೆಯಿಂದ ಹಳ್ಳಿಗೆ ಬರುವುದಿಲ್ಲವೆಂದು ಹಠ ಹಿಡಿದವರು

☐ a) ಸುಂದರಿ

☐ b) ವರ್ತಕನ ಮೊದಲ ಇಬ್ಬರು ಮಕ್ಕಳು

☐ c) ರಾಜಕುಮಾರ

☐ d) ಮೃಗ

11. ಬಡತನದಿಂದ ವರ್ತಕನಿಗೆ ಮತ್ತು ಸುಂದರಿಗೆ ತೊಂದರೆ ಆಗಲಿಲ್ಲ ಕಾರಣ

☐ a) ಅವರ ಜೀವನ ಸರಳವಾಗಿತ್ತು

☐ b) ಅವರಿಗೆ ಸಾಲ ಸಿಕ್ಕಿತು

☐ c) ಅವರಿಗೆ ವ್ಯಾಪಾರ ಹೆಚ್ಚಾಯಿತು

☐ d) ಈ ಎಲ್ಲವೂ ಕಾರಣ

12. ವರ್ತಕನಿಗೆ ಹಿರಿಯ ಮಕ್ಕಳು ಏನು ತರಲು ಕೇಳಿಕೊಂಡರು ?

☐ a) ಬಟ್ಟೆಗಳು

☐ b) ಒಡವೆಗಳು

☐ c) ಅಲಂಕಾರದ ವಸ್ತುಗಳು

☐ d) ಈ ಎಲ್ಲವೂ

13. ವರ್ತಕ ಹಡಗನ್ನು ಸ್ವಾಗತಿಸಲು ಹೊರಟಾಗ ಸುಂದರಿ ತನಗೆ ಏನು ತರಬೇಕೆಂದು ಕೇಳಿಕೊಂಡಳು ?

- ☐ a) ಬಟ್ಟೆಗಳು
- ☐ b) ಒಡವೆಗಳು
- ☐ c) ಅಲಂಕಾರದ ವಸ್ತುಗಳು
- ☐ d) ಗುಲಾಬಿ ಹೂಗಳ ಗೊಂಚಲು

14. ವರ್ತಕ ತನ್ನ ಮಗಳು ಸುಂದರಿಗಾಗಿ ಏನನ್ನು ಕಿತ್ತುಕೊಂಡನು ?

- ☐ a) ಗುಲಾಬಿ ಹೂಗಳ ಗೊಂಚಲು
- ☐ b) ಹಣ್ಣುಗಳನ್ನು
- ☐ c) ಎಲೆಗಳನ್ನು
- ☐ d) ಆಹಾರವನ್ನು

15. ವರ್ತಕ ನನ್ನನ್ನು ಕೊಲ್ಲಲು ಕುತ್ತಿಗೆಗೆ ಕೈ ಹಾಕಿದವರು ?

- ☐ a) ಕಳ್ಳರು
- ☐ b) ಮೃಗ
- ☐ c) ವರ್ತಕನ ಹಿರಿಯ ಮಕ್ಕಳು
- ☐ d) ಸುಂದರಿ

16. "ಅಯ್ಯೋ ನನ್ನನ್ನು ಕೊಲ್ಲಬೇಡ, ನನ್ನನ್ನು ಮೇಲೆ ಕರುಣೆದೋರು" ಎಂದು ವರ್ತಕ ಯಾರಲ್ಲಿ ಬೇಡಿಕೊಂಡನು ?

- ☐ a) ಆಳುಗಳಲ್ಲಿ
- ☐ b) ಮೃಗನಲ್ಲಿ
- ☐ c) ದುಷ್ಟಬುದ್ಧಿಯಲ್ಲಿ
- ☐ d) ಹುಲಿರಾಯನಲ್ಲಿ

17. "ನಾನು ಮನುಷ್ಯನೂ ಅಲ್ಲ, ನನ್ನಲ್ಲಿ ಕರುಣೆ ಇಲ್ಲ " ಎಂದು ಯಾರು ಯಾರಿಗೆ ಹೇಳಿದರು ?

- ☐ a) ವರ್ತಕ - ಮೃಗಕ್ಕೆ
- ☐ b) ಮೃಗ - ವರ್ತಕನಿಗೆ
- ☐ c) ಸುಂದರಿ - ಮೃಗಕ್ಕೆ
- ☐ d) ಮೃಗ - ಸುಂದರಿಗೆ

18. "ನನ್ನ ಮಗಳಿಗಾಗಿ ಒಂದು ಗೊಂಚಲು ಗುಲಾಬಿ ತೆಗೆದುಕೊಂಡಿದ್ದು ಅಪರಾಧವೆ ?" ಯಾರು ಯಾರಿಗೆ ಹೇಳಿದರು ?

- ☐ a) ವರ್ತಕ - ಮೃಗಕ್ಕೆ
- ☐ b) ಮೃಗ - ವರ್ತಕನಿಗೆ
- ☐ c) ಸುಂದರಿ - ಮೃಗಕ್ಕೆ
- ☐ d) ಮೃಗ - ಸುಂದರಿಗೆ

19. "ತಿಂದಿದ್ದೀ ; ತೇಗಿದ್ದೀ ; ಗುಲಾಬಿ ಕಿತ್ತಿದ್ದೀ " ಎಂದು ಸಿಟ್ಟಿನಿಂದ ಅಬ್ಬರಿಸಿದವರು

- ☐ a) ವರ್ತಕ
- ☐ b) ಮೃಗ
- ☐ c) ವರ್ತಕನ ಹಿರಿಯ ಮಕ್ಕಳು
- ☐ d) ಸುಂದರಿ

20. ಮೃಗ ಏನನ್ನು ಕೊಟ್ಟರೆ ವರ್ತಕರನ್ನು ಕೊಲ್ಲುವುದಿಲ್ಲ ಎಂದು ಹೇಳಿತು ?

- ☐ a) ಗುಲಾಬಿ ಹೂವಿನ ಗೊಂಚಲನ್ನು
- ☐ b) ವರ್ತಕನ ಮುದ್ದು ಮಗಳನ್ನು
- ☐ c) ವರ್ತಕನ ಹಿರಿಯ ಮಕ್ಕಳನ್ನು
- ☐ d) ಊಟ ಮಾಡಿದ್ದನ್ನು

21. ಮೃಗದ ಅರಮನೆಗೆ ಹೋಗಲು ಒಪ್ಪಿದವರು

- ☐ a) ವರ್ತಕನ ಮೊದಲ ಇಬ್ಬರು ಮಕ್ಕಳು
- ☐ b) ವರ್ತಕ
- ☐ c) ಸುಂದರಿ
- ☐ d) ರಾಜಕುಮಾರ

22. ವರ್ತಕನಿಗೆ ಮೃಗವು ಕೊಟ್ಟ ಬುಟ್ಟಿಯಲ್ಲಿ ಏನಿದ್ದವು ?

- ☐ a) ವಜ್ರ - ವೈಡೂರ್ಯಗಳು
- ☐ b) ಮುತ್ತುಗಳು
- ☐ c) ರತ್ನಗಳು
- ☐ d) ಇವೆಲ್ಲವೂ

23. ಸುಂದರಿ ಅರಮನೆಯನ್ನು ಹೇಗೆ ಪ್ರವೇಶಿಸಿದಳು ?

- ☐ a) ಸಂತೋಷದಿಂದ
- ☐ b) ಸಂಭ್ರಮದಿಂದ
- ☐ c) ಅಳುತ್ತಾ
- ☐ d) ಭಯದಿಂದ

24. ಸುಂದರಿಯ ನೆಚ್ಚಿನ ಪುಸ್ತಕ ಭಂಡಾರ ಮತ್ತು ಸಂಗೀತದ ಇಂಪು ಎಲ್ಲಿತ್ತು ?

- ☐ a) ಮೃಗದ ಗೃಹದಲ್ಲಿ
- ☐ b) ವರ್ತಕನ ಮನೆಯಲ್ಲಿ
- ☐ c) ಕಾಡಿನಲ್ಲಿ
- ☐ d) ಹಡಗಿನಲ್ಲಿ

25. ಮೃಗದ ಬಾಹ್ಯ ಆಕಾರ ಹೇಗಿತ್ತು ?

- ☐ a) ಕೋರೆಹಲ್ಲು, ಹಂದಿಯ ದೇಹವನ್ನು ಹೊಂದಿತ್ತು
- ☐ b) ತೋಳದ ಚಲನೆಯನ್ನು ಪಡೆದಿತ್ತು
- ☐ c) ಭೀಕರವಾಗಿ ಕರ್ಕಶ ಸದ್ದು ಮಾಡುತ್ತಿತ್ತು
- ☐ d) ಎಲ್ಲಾ ರೀತಿಯಿಂದ ಇತ್ತು

26. "ನೀನು ಸಂತೋಷದಿಂದ ಬಂದೆಯಾ" ಎಂದು ಯಾರು ಯಾರಿಗೆ ಕೇಳಿದರು ?

- ☐ a) ವರ್ತಕ - ಸುಂದರಿಗೆ
- ☐ b) ಸುಂದರಿ - ವರ್ತಕನಿಗೆ
- ☐ c) ಮೃಗ - ಸುಂದರಿಗೆ
- ☐ d) ಸುಂದರಿ - ಮೃಗಕ್ಕೆ

27. ಮೃಗ ನಾನು ನಿನಗೆ ಇಷ್ಟವಾ ? ಕೇಳಿದಾಗ ಸುಂದರಿಯ ಪ್ರತಿಕ್ರಿಯೆ

☐ a) ನಾನು ಸುಳ್ಳು ಹೇಳಲಾರೆ
☐ b) ನೀನು ಕುರೂಪಿ
☐ c) ಆದರೂ ನೀನು ತುಂಬಾ ಒಳ್ಳೆಯವನು ಅಂತಿದ್ದೆ
☐ d) ಈ ಎಲ್ಲ ರೀತಿಯಲ್ಲಿ ಪ್ರತಿಕ್ರಿಯೆ ಹೇಳಿದಳು

28. "ಜಗತ್ತಿನ ಅನೇಕ ಮನುಷ್ಯರು ಸುಂದರ ಆಕಾರ ಪಡೆದು ಮೃಗದ ಹೃದಯ ಹೊಂದಿರುತ್ತಾರೆ " ಎಂದು ಯಾರು ಯಾರಿಗೆ ಹೇಳಿದರು ?

☐ a) ವರ್ತಕ - ಸುಂದರಿಗೆ
☐ b) ಸುಂದರಿ - ವರ್ತಕನಿಗೆ
☐ c) ಮೃಗ - ಸುಂದರಿಗೆ
☐ d) ಸುಂದರಿ - ಮೃಗಕ್ಕೆ

29. ಮೃಗದ ಒರಟು ಮಾತು, ತಿಕ್ಕಲು ನಡವಳಿಕೆ ಯಾರ ಮನಸ್ಸಿನಲ್ಲಿ ನಗುತ್ತಿದ್ದವು ?

☐ a) ವರ್ತಕ
☐ b) ಸುಂದರಿ
☐ c) ರಾಜಕುಮಾರ
☐ d) ದೇವತೆ

30. ಮೃಗದ ಕಾಳಜಿಯನ್ನು ನೆನೆದು ಯಾರ ಮನ ಕರಗುತ್ತಿತ್ತು ?

☐ a) ವರ್ತಕ
☐ b) ಸುಂದರಿ
☐ c) ವರ್ತಕನ ಹಿರಿಯ ಮಕ್ಕಳು
☐ d) ದೇವತೆ

31. ಮೃಗ ನಿರಾಶನಾಗಿ ನಿಟ್ಟುಸಿರು ಬಿಡಲು ಕಾರಣ

☐ a) ಮದುವೆಗೆ ನಿರಾಕರಿಸಿದ್ದು
☐ b) ಮನೆಗೆ ಹೋಗಲು ಕೇಳಿದ್ದು
☐ c) ವಜ್ರ ವೈಢೂರ್ಯಗಳನ್ನು ಕೇಳಿದ್ದು
☐ d) ಇವೆಲ್ಲವೂ

32. ಸುಂದರಿಗೆ ಮೃಗವನ್ನು ನೋಡಬೇಕೆಂಬ ಆಶೆ ಏಕೆ ಉಂಟಾಯಿತು ?

☐ a) ಮೃಗದ ಮುಖ, ಚಲನವಲನ ನೆನಪಾಗಿದ್ದರಿಂದ
☐ b) ಮೃಗ ಎಂದು ತನ್ನ ವಚನ ಮುರಿದಿರಲಿಲ್ಲ ಎಂಬ ಭಾವನೆಯಿಂದ
☐ c) ಮನ ನೋಯಿಸದೆ ತನ್ನನ್ನು ನೆಮ್ಮದಿಯಾಗಿ ಇಡುವುದೇ ಅದರ ಸುಖವಾಗಿದ್ದರಿಂದ
☐ d) ಈ ಎಲ್ಲಾ ಕಾರಣಗಳಿಂದ

33. ಸುಂದರಿಯ ಮನಸ್ಸಿನಲ್ಲಿ ಯಾವುದು ತುಂಬಿತ್ತು ?

☐ a) ಅರಮನೆಯ ಸುಖ
☐ b) ಮೃಗದ ವ್ಯಕ್ತಿತ್ವ
☐ c) ತವರಿನ ಪ್ರೀತಿ
☐ d) ತಂದೆಯ ವ್ಯಕ್ತಿತ್ವ

34. ಸುಂದರಿ ಪುನಹ ಅರಮನೆಗೆ ಹಿಂತಿರುಗಿದಾಗ ಮೃಗದ ಸ್ಥಿತಿ ಹೇಗಿತ್ತು ?

- ☐ a) ಮೃಗ ನೆಲಕ್ಕೊರಗಿತ್ತು
- ☐ b) ತೇಲುಗಣ್ಣು ಮೇಲುಗಣ್ಣು ಆಗಿ ಮಲಗಿತ್ತು
- ☐ c) ದೇಹ ಬಡವಾಗಿ ಹೋಗಿತ್ತು
- ☐ d) ಎಲ್ಲಾ ಸ್ಥಿತಿಯಲ್ಲಿತ್ತು

35. "ನೀನು ನನ್ನವನು ನೀನು ಸಾಯಬಾರದು; ನಾನು ನಿನ್ನನ್ನು ಮದುವೆ ಆಗುತ್ತೇನೆ" ಎಂದು ಕಂಬನಿಗರೆದರು

- ☐ a) ಸುಂದರಿ
- ☐ b) ದೇವತೆ
- ☐ c) ವರ್ತಕನ ಮೊದಲ ಮಗಳು
- ☐ d) ವರ್ತಕನ ಎರಡನೆಯ ಮಗಳು

36. "ನೀನಿಲ್ಲದೆ ನನಗೆ ಊಟ ಸೇರಲಿಲ್ಲ, ನನಗೆ ನಿದ್ರೆ ಬರಲಿಲ್ಲ " ಎಂದು ಹೇಳಿದವರು

- ☐ a) ದೇವತೆ
- ☐ b) ವರ್ತಕ
- ☐ c) ಸುಂದರಿ
- ☐ d) ರಾಜಕುಮಾರ

37. "ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರಿಗೆ ಮೃಗವಾಗಿಯೇ ಇರು " ಎಂದು ರಾಜಕುಮಾರನಿಗೆ ಶಾಪ ಹಾಕಿದವರು

- ☐ a) ದೇವತೆ
- ☐ b) ಸುಂದರಿ
- ☐ c) ರಾಜಕುಮಾರ
- ☐ d) ಮೃಗ

38. ರಾಜಕುಮಾರನ ಮೃಗತ್ವ ಯಾರಿಂದ ಕರಗಿತು ?

- ☐ a) ವರ್ತಕನಿಂದ
- ☐ b) ದೇವತೆಯಿಂದ
- ☐ c) ಸುಂದರಿಯಿಂದ
- ☐ d) ಮೃಗದಿಂದ

39. ಯಾರು ಶಾಪಗೊಂಡು ಮೃಗವಾಗಿದ್ದರು ?

- ☐ a) ಸುಂದರಿ
- ☐ b) ವರ್ತಕ
- ☐ c) ರಾಜಕುಮಾರ
- ☐ d) ಭಗತ್ ಸಿಂಗ್

40. ಶಾಪ ವಿಮೋಚನೆಯ ಫಲ

- ☐ a) ರಾಜಕುಮಾರನ ಮೃಗತ್ವ ಕರಗಿತು
- ☐ b) ಸುಂದರಿ ಮತ್ತು ರಾಜಕುಮಾರರ ಮದುವೆಯಾಯಿತು
- ☐ c) ರಾಜಕುಮಾರ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದನು
- ☐ d) ಈ ಎಲ್ಲಾ ಫಲಗಳು

## Answer Key

| | | | | | | | |
|---|---|---|---|---|---|---|---|
| 1. | a | 11. | a | 21. | c | 31. | a |
| 2. | c | 12. | d | 22. | d | 32. | d |
| 3. | d | 13. | d | 23. | d | 33. | b |
| 4. | a | 14. | a | 24. | a | 34. | d |
| 5. | d | 15. | b | 25. | d | 35. | a |
| 6. | d | 16. | b | 26. | c | 36. | c |
| 7. | d | 17. | b | 27. | d | 37. | a |
| 8. | b | 18. | a | 28. | c | 38. | c |
| 9. | c | 19. | b | 29. | b | 39. | c |
| 10. | b | 20. | b | 30. | b | 40. | d |